ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

**ರಾಜ್ಯ ಯೋಜನಾ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು- 560 001**

ಸಂಖ್ಯೆ: ಸಶಿಅ/ಆಚ/ಸ್ವಪ/2017-18 ದಿನಾಂಕ: 22.08.2017

# ಸುತ್ತೋಲೆ

ವಿಷಯ: ಶಾಲಾ ಹಂತದಲ್ಲಿ **"ಸ್ವಚ್ಛತಾ ಪಖ್ವಾಡಾ"** ಕಾರ್ಯಕ್ರಮದಡಿ ಹಮ್ಮಿಕೊಳ್ಳಬೇಕಾದ ಚಟುವಟಿಕೆಗಳ ಕುರಿತು (1-15 ಸೆಪ್ಟೆಂಬರ್, 2017)

ಉಲ್ಲೇಖ: ಎಂಹೆಚ್‌ಆರ್‌ಡಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆರವರ D.O.F.No.27- 8/2014-EE,16

---------------

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ "ಸ್ವಚ್ಛತಾ ಪಖ್ವಾಡಾ" ಕಾರ್ಯಕ್ರಮದಡಿ ದಿನಾಂಕ 1-15 ಸೆಪ್ಟೆಂಬರ್, 2017ರವರೆಗೆ ಶಾಲಾ ಹಂತದಲ್ಲಿ ಶುಚಿತ್ವಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಹಮ್ಮಿಕೊಂಡು ಮಕ್ಕಳಲ್ಲಿ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸಿ, ಪ್ರತಿಯೊಂದು ಮಗು ವೈಯಕ್ತಿಕವಾಗಿ ಶಾಲೆ, ಸಮುದಾಯ ಹಾಗೂ ಮನೆಯ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ಪ್ರೇರೇಪಿಸಲು ಕೆಳಕಂಡ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಸೂಚಿಸಿದೆ ಸ್ವಚ್ಛತಾ ಕಾರ್ಯಕ್ರಮದ ಫೋಟೋಗಳು ಹಾಗೂ ದಿನಾಂಕ 5.9.2017 ರಂದು ನಡೆಸುವ ಚಿತ್ರಕಲೆ ಸ್ಪರ್ಧೆಯ ಫೋಟೋಗಳಲ್ಲಿ ತಮ್ಮ ಜಿಲ್ಲೆಯ ಶಾಲೆಗಳಲ್ಲಿನ ಅತ್ಯುತ್ತಮ ಫೋಟೋಗಳನ್ನು ಎಂಹೆಚ್‌ಆರ್‌ಡಿ ವೆಬ್‌ಪೋರ್ಟಲ್ ನಲ್ಲಿ ಅಪ್‌ಲೋಡ್ ಮಾಡಲು ಕ್ರಮ ವಹಿಸುವುದು.

1. **1.9.2017 – ಶುಕ್ರವಾರ "ಸ್ವಚ್ಛತಾ ಶಪಥ ದಿನ"** (Swachhta Shapath Day)

    - ಶಾಲೆಯಲ್ಲಿರುವ ಪ್ರತಿಯೊಂದು ಮಗು, ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗ ವೈಯಕ್ತಿಕವಾಗಿ ತನ್ನ ಶಾಲೆ, ಸಮುದಾಯ ಹಾಗೂ ಮನೆಯನ್ನು ಸ್ವಚ್ಛವಾಗಿಟ್ಟುಕೊಳ್ಳುವ ಒಂದು ಚಟುವಟಿಕೆಯನ್ನು ಕೈಗೊಳ್ಳುವಂತೆ ಹೇಳಿಕೆಯನ್ನು ನೀಡಿ ಶಪಥ ಮಾಡುವುದು.
    - ಮೊದಲನೆ ದಿನವೇ ಈ ಚಟುವಟಿಕೆಯನ್ನು ಅನುಷ್ಠಾನಗೊಳಿಸುವುದು.

2. **2.9.2017 – ಶನಿವಾರ : "ಸ್ವಚ್ಛತಾ ಜಾಗೃತಿ ದಿನ"** (Swachhta Awareness Day)

    - ಶಿಕ್ಷಕರು ಮಕ್ಕಳಿಗೆ ಸ್ವಚ್ಛತೆ ಹಾಗೂ ನೈರ್ಮಲ್ಯೀಕರಣದ ಪ್ರಾಮುಖ್ಯತೆಯ ಬಗ್ಗೆ ತಿಳಿಸುವುದು.
    - ಶಿಕ್ಷಕರು, ಎಸ್‌ಡಿಎಂಸಿರವರ ನೇತೃತ್ವದಲ್ಲಿ ಪೋಷಕರ ಸಭೆಯನ್ನು ಕರೆದು ನೈರ್ಮಲ್ಯದ ಪ್ರಾಮುಖ್ಯತೆಯನ್ನು ತಿಳಿಸಿ, ಶುಚಿತ್ವಕ್ಕೆ ಸಂಬಂಧಿಸಿದಂತೆ ಉತ್ತಮ ಅಭ್ಯಾಸಗಳನ್ನು ಆಚರಿಸಿ ಮುಂದುವರಿಸುವಂತೆ ಉತ್ತೇಜಿಸುವುದು.
    - ವಿದ್ಯಾರ್ಥಿಗಳಿಂದ ಸ್ವಚ್ಛತೆ ಕುರಿತಂತೆ ಪ್ರಾರ್ಥನೆ ವೇಳೆಯಲ್ಲಿ ಮಾತನಾಡಿಸುವುದು ಹಾಗೂ ಸ್ವಚ್ಛತೆಗೆ ಸಂಬಂಧಿಸಿದಂತೆ ತರಗತಿವಾರು ರಸಪ್ರಶ್ನೆ ಕಾರ್ಯಕ್ರಮವನ್ನು ಏರ್ಪಡಿಸುವುದು.

3. **3.9.2017 – ಭಾನುವಾರ : ಶುಚಿತ್ವ ನಿರ್ವಹಣೆ ಮತ್ತು ಯೋಜನಾ ದಿನ** (Cleanliness Maintenance and Planning Day)

    - ಶಿಕ್ಷಕರು ಶಾಲೆಯ ಪ್ರತಿಯೊಂದು ಭಾಗವನ್ನು ಪರೀಕ್ಷಿಸಿ, ಶುಚಿತ್ವವನ್ನು ಕಾಪಾಡಲು, ಸೌಲಭ್ಯಗಳನ್ನು ಒದಗಿಸಲು ಯೋಜನೆಯನ್ನು ತಯಾರಿಸುವುದು.
    - ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳು ಶಾಲೆಯನ್ನು ಸ್ವಚ್ಛಗೊಳಿಸಲು ಕಾರ್ಯತಂತ್ರಗಳನ್ನು ರೂಪಿಸಿ ಚಾಲನೆಗೊಳಿಸುವುದು.
    - ಶೌಚಾಲಯಗಳು, ಅಡುಗೆ ಮನೆ, ತರಗತಿ ಕೊಠಡಿಗಳು, ಕಿಟಕಿಗಳು, ಅಲಮಾರುಗಳು, ಫ್ಯಾನ್‌ಗಳು, ಶಾಲಾ ಆವರಣದ ಸುತ್ತಮುತ್ತಲಿನ ಪ್ರದೇಶದ ಪೊದೆಗಳನ್ನು ಶುಚಿಗೊಳಿಸುವುದು.

4. **4.9.2017 – ಸೋಮವಾರ : ಹಸಿರು ಶಾಲಾ ಚಾಲನೆ (Green School Drive)**

    - ಪ್ರತಿ ಶಾಲೆಯಲ್ಲಿ ಮಕ್ಕಳಿಗೆ ತ್ಯಾಜ್ಯಗಳ ವರ್ಗೀಕರಣದ ಬಗ್ಗೆ ತಿಳಿಸಿ, ಕಸವನ್ನು ವಿಲೇವಾರಿ ಮಾಡುವುದು.
    - ಶಾಲಾ ಆವರಣ, ಶೌಚಾಲಯದ ಸುತ್ತ ಕೈತೋಟ ಹಾಗೂ ಮರಗಳನ್ನು ಬೆಳೆಸುವುದಕ್ಕೆ ತ್ಯಾಜ್ಯ ನೀರನ್ನು ಬಳಸುವುದು.

5. 5.9.2017 – ಮಂಗಳವಾರ : **ಸ್ವಚ್ಛತಾ ಭಾಗವಹಿಸುವಿಕೆ ದಿನ (Swachhata Participation Day)**

- ಶಾಲೆಗಳಲ್ಲಿ ಶುದ್ಧ ಹಾಗೂ ಉತ್ತಮವಾಗಿ ಶಾಲಾ ಆವರಣ, ಶೌಚಾಲಯಗಳನ್ನು ನಿರ್ವಹಿಸುವ ಬಗ್ಗೆ ಕ್ಲಸ್ಟರ್, ಬ್ಲಾಕ್ ಮತ್ತು ಜಿಲ್ಲಾ ಹಂತದಲ್ಲಿ ಸ್ಪರ್ಧೆಗಳನ್ನು ಆಯೋಜಿಸುವುದು.
- ಸ್ವಚ್ಛತೆ, ನೈರ್ಮಲ್ಯದ ಅಭ್ಯಾಸಗಳ ಕುರಿತು ವಿದ್ಯಾರ್ಥಿಗಳಿಗೆ **ಪ್ರಬಂಧ ಸ್ಪರ್ಧೆ**, ರಸಪ್ರಶ್ನೆ ಕಾರ್ಯಕ್ರಮ, ನಾಟಕ, ಕವನಗಳ ರಚನೆಗಳನ್ನು ಏರ್ಪಡಿಸುವುದು.
- ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ **ಚಿತ್ರಕಲೆ ಸ್ಪರ್ಧೆ**ಯನ್ನು ಏರ್ಪಡಿಸುವುದು.
- ಸ್ವಚ್ಛತೆ ಕುರಿತು ಚರ್ಚಾ ಸ್ಪರ್ಧೆ ಏರ್ಪಡಿಸುವುದು.

6. 6.9.2017 – **ಬುಧವಾರ: ಉಗುರು ಶುಚಿತ್ವ ದಿನ (Nail Cleanliness)**

- ವಿದ್ಯಾರ್ಥಿಗಳು ಉಗುರುಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ತಿಳಿಸುವುದು.
- ಶಾಲೆ/ಸಂಸ್ಥೆಗಳಲ್ಲಿ ಹಳೆಯ ಅನಗತ್ಯ ಕಡತಗಳು, ಮುರಿದ ಪೀಠೋಪಕರಣಗಳು, ಯಂತ್ರಗಳು ಇತ್ಯಾದಿ ತ್ಯಾಜ್ಯ ವಸ್ತುಗಳನ್ನು ನಿಯಮಾನುಸಾರ ವಿಲೇವಾರಿ ಮಾಡುವುದು.

7. 7.9.2017 – **ಗುರುವಾರ: ಕೈತೊಳೆಯುವ ದಿನ (Hand Wash Day)**

- ಶಾಲಾ ಮಕ್ಕಳಲ್ಲಿ ಊಟಕ್ಕೆ ಮುನ್ನ, ಶೌಚಾಲಯ ಬಳಸಿದ ನಂತರ ಸೋಪಿನಿಂದ ಕೈತೊಳೆಯುವಂತೆ ಅಭ್ಯಾಸ ಮಾಡಿಸುವುದು.
- ಸ್ಥಳೀಯ ಪ್ರತಿನಿಧಿಗಳ ಸಹಾಯದಿಂದ ಶಿಕ್ಷಕರು ಮತ್ತು ವಿದ್ಯಾರ್ಥಿಗಳು "ಸ್ವಚ್ಛ ಪಖ್ವಾಡಾ" ಕಾರ್ಯಕ್ರಮದ ಬಗ್ಗೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪ್ರಚಾರ ಮಾಡುವುದು.

8. 8.9.2017 – **ಶುಕ್ರವಾರ: ವೈಯಕ್ತಿಕ ನೈರ್ಮಲ್ಯ ದಿನ (Personal Hygiene Day)**

- ಸ್ವಚ್ಛತೆಯನ್ನು ಕಾಪಾಡಿಕೊಳ್ಳುವಂತೆ ಪ್ರೇರೇಪಿಸುವ ಕಾರ್ಯಕ್ರಮಗಳನ್ನು ದೃಕ್‌ಶ್ರವಣ ಮಾಧ್ಯಮದ ಮೂಲಕ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಿಬ್ಬಂದಿಗೆ ತೋರಿಸುವುದು.
- ನೈರ್ಮಲ್ಯದ ಅಭ್ಯಾಸಗಳಿಂದ ಆರೋಗ್ಯದ ಮೇಲೆ ಬೀರುವ ಪ್ರಭಾವಗಳನ್ನು ತಿಳಿಸುವುದು.
- ನೈರ್ಮಲ್ಯದ ಅಭ್ಯಾಸಗಳನ್ನು ರೂಢಿಸಿಕೊಳ್ಳಲು ಪೂರಕವಾದ ಪುಸ್ತಕಗಳನ್ನು ಓದುವುದು.

9. 9.9.2017 – **ಶನಿವಾರ: ಶೌಚಾಲಯ ಜಾಗೃತಿ ದಿನ (Toilet Awareness Day)**

- ಶೌಚಾಲಯಗಳನ್ನು ಬಳಸುವ ಆರೋಗ್ಯಕರ ವಿಧಾನದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸುವುದು.
- ಶಾಲಾ ಆಡಳಿತ ಮಂಡಳಿಯು ಸಭೆಯಲ್ಲಿ ಸ್ವಚ್ಛತೆಯನ್ನು ಕಾಪಾಡುವ ಬಗ್ಗೆ ಚರ್ಚಿಸುವುದು.
- ಪೋಲಾಗುವ ನೀರನ್ನು ತಡೆಗಟ್ಟುವುದು, ಕೈತೊಳೆಯುವ ಘಟಕದಿಂದ ಬರುವ ನೀರನ್ನು ಶಾಲಾ ಕೈತೋಟಕ್ಕೆ ಹರಿಯುವಂತೆ ವ್ಯವಸ್ಥೆಗೊಳಿಸುವುದು.

10. 10.9.2017 – **ಭಾನುವಾರ: ಸಮುದಾಯ ಜಾಗೃತಿ ದಿನ (Community Awareness Day)**

- ಶಾಲೆಗಳು/ಸಂಸ್ಥೆಗಳು ಸ್ವಚ್ಛ ಅಭಿಯಾನ ಕಾರ್ಯಕ್ರಮದಲ್ಲಿ ಸಮುದಾಯದ ಹೆಚ್ಚಿನ ಭಾಗವಹಿಸುವಿಕೆಗೆ ಗಮನ ನೀಡುವುದು.
- ಸ್ವಚ್ಛತೆ ಬಗ್ಗೆ ಘೋಷಣೆಗಳನ್ನು ಕೂಗುತ್ತಾ ಜಾಥ ಹೊರಡುವುದು

11. 11.9.2017 – **ಸೋಮವಾರ: ಸ್ವಚ್ಛತಾ ಶಾಲಾ ಪ್ರದರ್ಶನ ದಿನ (Swachhata School Exhibition Day)**

- ಶಾಲಾ ಹಂತದಲ್ಲಿ ಸ್ವಚ್ಛತಾ ಪ್ರದರ್ಶನವನ್ನು ಹಮ್ಮಿಕೊಂಡು ಛಾಯಾ ಚಿತ್ರಗಳು, ವರ್ಣಚಿತ್ರಗಳು, ಘೋಷಣೆಗಳು ಇತ್ಯಾದಿ ಸ್ವಚ್ಛತಾ ಚಟುವಟಿಕೆಗಳನ್ನು ಪ್ರದರ್ಶಿಸಿ, ಪಾಲಕರು, ಸಮುದಾಯದ ಸದಸ್ಯರು ಹಾಗೂ ಹಳೆಯ ವಿದ್ಯಾರ್ಥಿಗಳನ್ನು ಆಹ್ವಾನಿಸುವುದು.
- ಜಿಲ್ಲಾ ಹಂತದಲ್ಲಿ ಸ್ವಚ್ಛತಾ ಆಚರಣೆಯ ಮುಖ್ಯಾಂಶಗಳ ಕುರಿತು ಯುವ ಪೀಳಿಗೆಗೆ ಜಾಗೃತಿ ಮೂಡಿಸುವುದು.
- ಈ ಪ್ರದರ್ಶನಗಳನ್ನು ದಾಖಲೀಕರಣ ಮಾಡುವುದು.
- ತ್ಯಾಜ್ಯ ಸಂಗ್ರಹಕ್ಕಾಗಿ ಸ್ಥಳೀಯ ಮರುಬಳಕೆಯ ಕಚ್ಚಾ ವಸ್ತುಗಳನ್ನು ಬಳಸಿ, ಕಲಾಕೃತಿಗಳನ್ನು ತಯಾರಿಸುವುದು. ಅಂದರೆ ಸಂಸ್ಕೃತಿಯನ್ನು ಉತ್ತೇಜಿಸುವ ಸ್ಥಳೀಯ ಕೌಶಲ್ಯಗಳನ್ನು ಬಳಸಿಕೊಂಡು ಕಲಾತ್ಮಕ ಚಿತ್ರಗಳನ್ನು ಕಸದ ಬುಟ್ಟಿಗಳ ಮೇಲೆ ರಚಿಸುವುದು.

12. 12.9.2017 – ಮಂಗಳವಾರ: ಸ್ವಚ್ಛ ನೀರಿನ ದಿನ (Swachh Water Day)

- ಶಾಲೆಗಳಲ್ಲಿ ಸಂಗ್ರಹಿಸಿದ ನೀರನ್ನು ತಪಾಸಣೆ ಮಾಡಿ, ವಾರಕ್ಕೊಮ್ಮೆ ಶುಚಿಗೊಳಿಸುವುದು.
- ಶಾಲೆಗಳು/ಸಂಸ್ಥೆಗಳಲ್ಲಿ ಅಶುದ್ಧ ನೀರು ಸುರಕ್ಷಿತ ಶುದ್ಧ ನೀರನ್ನು ಸೇರದಂತೆ ಪರೀಕ್ಷಿಸಿಕೊಳ್ಳುವುದು.
- ಅಸುರಕ್ಷಿತ ನೀರಿನ ಸೇವನೆಯಿಂದ ಉಂಟಾಗುವ ಪರಿಣಾಮಗಳ ಬಗ್ಗೆ ತಿಳಿಸುವುದು.
- ನೈಸರ್ಗಿಕ ವಸ್ತುಗಳಾದ ಮರಳು ಶೋಧಕಗಳು, ಪಟಿಕಗಳಿಂದ ನೀರನ್ನು ಶುದ್ಧಗೊಳಿಸುವುದು.
- ನೀರಿನಿಂದ ಹರಡುವ ರೋಗಗಳ ಬಗ್ಗೆ ತಿಳಿಸಿ, ಸುರಕ್ಷಿತ ನೀರನ್ನು ಕುಡಿಯುವಂತೆ ಮಕ್ಕಳಿಗೆ ಪ್ರೇರೇಪಿಸುವುದು.

13. 13.9.2017 – ಬುಧವಾರ: ನೀರು ಕೊಯ್ಲು ದಿನ (Water Harvesting Day)

- ವಿದ್ಯಾರ್ಥಿಗಳಿಗೆ ಮಳೆ ಕೊಯ್ಲಿನಿಂದಾಗುವ ಅನುಕೂಲಗಳ ಬಗ್ಗೆ ಜಾಗೃತಿ ಮೂಡಿಸುವುದು.
- ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಶಾಲೆಯಲ್ಲಿ ಸರಳವಾದ ನೀರಿನ ಕೊಯ್ಲು ರಚನೆಯನ್ನು ಯೋಜಿಸುವುದು ಮತ್ತು ಕಾರ್ಯಗತಗೊಳಿಸುವುದು.

14. 14.9.2017 – ಗುರುವಾರ: ಪತ್ರ ಆಹ್ವಾನಿಸುವ ದಿನ (Letter Inviting Day)

- ಶಾಲೆಯಲ್ಲಿ ಶೌಚಾಲಯಗಳನ್ನು ನಿರ್ವಹಿಸುವ ಬಗ್ಗೆ ಗ್ರಾಮದ ಮುಖ್ಯಸ್ಥರು ಹಾಗೂ ಎಸ್‌ಡಿಎಂಸಿ ಸದಸ್ಯರಿಗೆ ಪತ್ರ ಬರೆದು ನಿರ್ವಹಣೆಗೆ ಬೇಕಾದ ಸೌಲಭ್ಯಗಳನ್ನು ಪಡೆಯುವುದು.
- "ಸ್ವಚ್ಛ ಪಖ್ವಾಡಾ" ಕಾರ್ಯಕ್ರಮದಡಿ ವಿದ್ಯಾರ್ಥಿಗಳು ಕಲಿತದ್ದನ್ನು ಪೋಷಕರಿಗೆ ಪತ್ರ ಬರೆದು ತಿಳಿಸುವುದು.
- ಸ್ವಚ್ಛತೆ ಬಗ್ಗೆ ಪೋಷಕರು ಮಾಡಬೇಕಾಗಿರುವ ಕಾರ್ಯಗಳ ಬಗ್ಗೆ ಪತ್ರ ಬರೆದು ತಿಳಿಸುವುದು. ಈ ಬಗ್ಗೆ ಮಾಹಿತಿ ಪಡೆದು ದಾಖಲೀಕರಣ ಮಾಡಿ ಎಂಹೆಚ್‌ಆರ್‌ಡಿ ರವರಿಗೆ ಕಳುಹಿಸುವುದು ಹಾಗೂ **ಸ್ವಚ್ಛ ಭಾರತ್ ವೆಬ್‌ಪೋರ್ಟಲ್‌ನಲ್ಲಿ ಕಾರ್ಯಕ್ರ,ಮ ಅನುಷ್ಠಾನಗೊಳಿಸಿದ ಬಗ್ಗೆ ಫೋಟೋ ಸಹಿತ ಮಾಹಿತಿಯನ್ನು ದಿನಾಂಕ 30.9.2017ರೊಳಗೆ ಅಪ್‌ಲೋಡ್ ಮಾಡುವುದು**

15. 15.9.2017 – ಶುಕ್ರವಾರ: ಸರ್ಕಾರಿ ದಿನಾಚರಣೆ ದಿನ (Meeting the Govt. Day)

- ರಾಜ್ಯದ ಶಿಕ್ಷಣ ಮಂತ್ರಿಗಳು/ಕಾರ್ಯದರ್ಶಿಗಳು ರಾಜ್ಯದಲ್ಲಿ ಶಾಲಾ ಮಕ್ಕಳನ್ನು (ಸ್ವಚ್ಛ ಪಖ್ವಾಡಾ ಕಾರ್ಯಕ್ರಮ) ಉದ್ದೇಶಿಸಿ ಮಾತನಾಡುವರು.
- ಎಂಹೆಚ್‌ಆರ್‌ಡಿ ಯ ಗೌರವಾನ್ವಿತ ಮಂತ್ರಿಯವರು ದೆಹಲಿಯಲ್ಲಿರುವ ಕೇಂದ್ರಿಯ ವಿದ್ಯಾಲಯಗಳು, ನವೋದಯ ವಿದ್ಯಾಲಯಗಳು ಹಾಗೂ ಇತರೆ ಶಾಲೆಗಳಲ್ಲಿ ಮಕ್ಕಳು 2017-18ರ ಸ್ವಚ್ಛತಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ವಿದ್ಯಾರ್ಥಿಗಳನ್ನು ಪ್ರೇರೇಪಿಸಿ ಮಾತನಾಡಲಿರುವರು.

**ರಾಜ್ಯ ಯೋಜನಾ ನಿರ್ದೇಶಕರು**
ಸರ್ವ ಶಿಕ್ಷಣ ಅಭಿಯಾನ -ಬೆಂಗಳೂರು

ಅಗತ್ಯ ಕ್ರಮಕ್ಕಾಗಿ:

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಮತ್ತು ಜಿಲ್ಲಾ ಉಪಸಮನ್ವಯಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಸರ್ವ ಶಿಕ್ಷಣ ಅಭಿಯಾನರವರ ಮೂಲಕ ಕ್ಷೇತ್ರ ಶಿಕ್ಷಣಾಧಿಕಾರಿಗಳು – ರವರಿಗೆ
2. ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಶಾಲಾ ಮುಖ್ಯ ಶಿಕ್ಷಕರಿಗೆ

ಮಾಹಿತಿಗಾಗಿ:

1. ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ರಸ್ತೆ, ಬೆಂಗಳೂರು.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ. ಬೆಂಗಳೂರು
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಹಾಗೂ ಕಲ್ಬುರ್ಗಿ ವಿಭಾಗ
4. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ. ಬೆಂಗಳೂರು
5. ನಿರ್ದೇಶಕರು (ಪ್ರೌಢ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ. ಬೆಂಗಳೂರು
6. ಕಛೇರಿ ಪ್ರತಿ